# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ. 609/2015

ಸಿಡಬ್ಲ್ಯೂ-9 ಪಿಡಬ್ಲ್ಯೂ-2

ಹೆಸರುಃ ಭೀಮಾಶಂಕರ

ತಂದೆಯ ಹೆಸರುಃ ಗುರುಸ್ವಾಮಿ

ವಯಸ್ಸುಃ 28 ವರ್ಷ

ಉದ್ಯೋಗಃ ಕೂಲಿ ಕೆಲಸ

ವಾಸ ಸ್ಥಳಃ ಬಟಗೇರ ಗ್ರಾಮ

ದಿನಾಂಕ 19-09-2024

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಆರೋಪಿಯ ಪರಿಚಯ ಇದೆ. ನಾನು ಮೃತ ದಿ.25-02-2015 ರಂದು ಸಂಜೆ 07-00 ಗಂಟೆಗೆ ಸೇಡಂ ನಿಂದ ರಾಯಲ್ ಎನ್ಫಿಲ್ಡ್ ಮೋಟಾರು ಸೈಕಲ್ ಮೇಲೆ ನಾನು ಮತ್ತು ಮಹಾನಂದ ಬರುತ್ತಿದ್ದೆವು. ಮಹಾನಂದ ಗಾಡಿ ಓಡಿಸುತ್ತಿದ್ದರು. ಬಿರ್ಲಾ ಸಿಮೆಂಟ್ ಪ್ಯಾಕ್ಟರಿಯ ಹತ್ತಿರ ಸುಮಾರು 07-30 ಗಂಟೆಗೆ 2 ನೇ ಗೇಟ್ ಬಳಿ ಕೋಡ್ಲಾ ಕ್ರಾಸ್ ದಾಟಿದ ನಂತರ ಲಾರಿ ಚಾಲಕ ಅತಿವೇಗ ಮತ್ತು ನಿಶ್ಕಾಳಜಿಯಿಂದ ಲಾರಿಯನ್ನು ಚಲಾಯಿಸಿಕೊಂಡು ಬಂದು ಮೊಟಾರು ಸೈಕಲ್‌ಗೆ ಡಿಕ್ಕಿ ಪಡಿಸಿರುತ್ತಾರೆ. ಡಿಕ್ಕಿ ಪಡಿಸಿದ್ದರಿಂದ ನಾವಿಬ್ಬರು ರೋಡಿನ ಮೇಲೆ ಬಿದ್ದಿರುತ್ತೇವೆ. ಮಹಾನಂದ ಈತನಿಗೆ ತಲೆಗೆ ಭಾರಿ ರಕ್ತಗಾಯವಾಗಿ ತಲೆಯಿಂದ ಮೆದುಳು ಹೊರಗೆ ಬಂದು ಸ್ಥಳದಲ್ಲಿಯೇ ಮೃತ ಪಟ್ಟಿರುತ್ತಾನೆ. ನನಗೆ ಸಹ ತಲೆಗೆ ರಕ್ತಗಾಯ, ಹಣೆಗೆ ರಕ್ತಗಾಯ, ಬಲ ಭುಜಕ್ಕೆ ರಕ್ತಗಾಯ ಆಗಿರುತ್ತದೆ.

ನಾನು ಮೂರ್ಚೆ ಹೋಗಿದ್ದೆ ನನಗೆ ಎಚ್ಚರ ವಾದಾಗ ಲಾರಿ ಚಾಲಕ ಓಡಿ ಹೋಗಿದ್ದಾನೆ ಎಂದು ತಿಳಿಸಿರುತ್ತಾರೆ. ನನ್ನನ್ನು ಸರ್ಕಾರಿ ಆಸ್ಪತ್ರೆ ಸೇಡಂ ನಲ್ಲಿ ದಾಖಲು ಮಾಡಿರುತ್ತಾರೆ. ಆದರೆ ಯಾರು ಮಾಡಿದರು ಎಂದು ನನಗೆ ಗೊತ್ತಿಲ್ಲ. ಹೆಚ್ಚಿನ ಚಿಕಿತ್ಸೆಗಾಗಿ ಕಲಬುರಗಿಗೆ ಹೋಗಿ ಅಲ್ಲಿಂದ ಮತ್ತೇ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆದುಕೊಡಿರುತ್ತೇನೆ. ಲಾರಿ ಚಾಲಕನ ತಪ್ಪಿನಿಂದ ಅಪಘಾತ ಆಗಿದೆ. ಅಂದಿನ ದಿನ ಲಾರಿ ಚಾಲಕ ಈಗ ನ್ಯಾಯಾಲಯದ ಮುಂದಿರುವ ವ್ಯಕ್ತಿ ಎಂದು ಗುರುತಿಸುತ್ತೇನೆ. ನನಗೆ ಕಲಬುರಗಿ ಆಸ್ಪತ್ರೆಯಲ್ಲಿ ಎಚ್ಚರವಾದಾಗ ಮಹಾನಂದ ಅವರು ಸ್ಥಳದಲ್ಲಿಯೇ ಮೃತ ಪಟ್ಟಿರುವ ಬಗ್ಗೆ ತಿಳಿಸಿರುತ್ತಾರೆ. ಲಾರಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ತೆರೆದ ನ್ಯಾಯಾಲಯದಲ್ಲಿ ಅಪಘಾತ ಪಡಿಸಿದ ಲಾರಿ ಪೋಟೋಗಳನ್ನು ತೋರಿಸಿ ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ 2 ಭಾವ ಚಿತ್ರ ಗಳನ್ನು ಒಟ್ಟಾಗಿ ನಿ ಪಿ 2 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ತಾವು ಬರುತ್ತಿದ್ದ ರಾಯಲ್ ಎನ್ ಫೀಲ್ಡ್ ನ 2 ಭಾವ ಚಿತ್ರ ಗಳನ್ನು ತೋರಿಸಿ ಸಾಕ್ಷಿ ನೋಡಿ ಗುರುತಿಸಿದರ ಮೇರೆಗೆ ಸದರಿ ದಾಖಲೆಗಳನ್ನು ಒಟ್ಟಾಗಿ ನಿ ಪಿ 3 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**<u>ಪಾಟೀ ಸವಾಲುಃ  ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ನಾನು ಮತ್ತು ಮಹಾನಂದ ಬರುತ್ತಿದ್ದ ಮೋಟಾರು ಸಂಖ್ಯೆಕೆ ಎ 32 ಇ ಡಿ 0712 ಎಂದರೆ ಸರಿ. ಲಾರಿಯ ಸಂಖ್ಯೆ ಎಂ ಎಚ್ 12 ಎಚ್ ಡಿ 4744 ಎಂದರೆ ಸರಿ.

**<u>ಪಾಟಿ ಸವಾಲುಃ ಶ್ರೀ ಸಿ ಬಿ ಆರೋಪಿ ಪರ ವಕೀಲರಿಂದ ಃ-</u>**

ಸಿಮೆಂಟ್ ಪ್ಯಾಕ್ಟರಿಗೆ ಒಟ್ಟು 2 ಗೇಟುಗಳಿವೆ. ದಕ್ಷಿಣ ದಿಕ್ಕಿಗೆ ಪ್ಯಾಕ್ಟರಿಯ 2 ಗೇಟುಗಳು ಇವೆ. ಬೆಟಗೇರಾ ದಿಂದ ಬರುವಾಗ ಪ್ಯಾಕ್ಟರಿಯಿಂದ 100 ಫೀಟ್ ದೂರದಲ್ಲಿ ಒಂದು ತಿರುವು ಇದೆ ಎಂದರೆ ಸರಿಯಲ್ಲ. ವಾಹನ ಚಲಾಯಿಸುವಾಗ ನಾವಿಬ್ಬರೂ ಹೆಲ್ಮೆಟ್ ಧರಿಸಿರಲಿಲ್ಲ. ಮೋಟಾರು ಸೈಕಲ್ ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ಪ್ಯಾಕ್ಟರಿ ಹತ್ತಿರ ಒಂದೆರಡು ಹಂಪ್ಸ್ ಇದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಈಗ ಇದೆ ಅಪಘಾತ ನಡೆದಾಗ ಇರಲಿಲ್ಲ ಎಂದು ನುಡಿಯುತ್ತಾರೆ. ಸಿಮೆಂಟ್ ಪ್ಯಾಕ್ಟರಿ ಎದುರುಗಡೆ ಎರಡೂ ಕಡೆಯಿಂದಲೂ ವಾಹನಗಳು ಓಡಾಡುತ್ತವೆ ಎಂದರೆ ಸರಿಯಲ್ಲ. ಎರಡೂ ಕಡೆಯಿಂದ ವಾಹನಗಳು ಸಂಚಾರ ಇರುವುದರಿಂದ ಗಾಡಿ ಓಡಿಸುವವರು ಎರಡೂ ಬದಿಯಲ್ಲಿ ಚಲಾಯಿಸುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ರಾಯಲ್ ಎನ್ ಫೀಲ್ಡ್ ಭಾರ ಇರುತ್ತವೆ ಎಂದರೆ ಸರಿ. ಭಾರ ಇದ್ದ ಕಾರಣ ಆಯ ತಪ್ಪಿ ನಾವಿಬ್ಬರೂ ಬಿದ್ದು ಅಪಘಾತ ಸಂಬವಿಸಿದೆ ಎಂದರೆ ಸರಿಯಲ್ಲ.

ಮೊಟರ್ ಸೈಕಲ್ ಪಾಸಿಂಗ್ ಯಾವ ಜಿಲ್ಲೆಯದು ಎಂದರೆ ನನಗೆ ಗೊತ್ತಿಲ್ಲ. ಲಾರಿಯ ಸಂಖ್ಯೆ ಹೇಳಲು ಬರುವುದಿಲ್ಲ. ಅಪಘಾತ ಸಂಬವಿಸಿದ ತಕ್ಷಣ ನಾನು ಮೂರ್ಚೆ ಹೋಗಿದ್ದ ತಕ್ಷಣ , ಯಾರು ಲಾರಿ ಚಲಾಯಿಸುತ್ತಿದ್ದರು ಎಂದು ನನಗೆ ಗೊತ್ತಾಗಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸಮಯ ಸಂಜೆ 07-00 ಗಂಟೆ ಆಗಿತ್ತು ಯಾರು ಲಾರಿ ಚಲಾಯಿಸುತ್ತಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಪ್ಯಾಕ್ಟರಿಯಲ್ಲಿ ಇಬ್ಬರು ವಾಚ್ ಮ್ಯಾನ್ ಇದ್ದರು ಎಂದರೆ ಸರಿಯಲ್ಲ.ಅಪಘಾತ ನಡೆದ ಸ್ಥಳದ ಚಕ್ಕು ಬಂದಿ ಹೇಳಲು ಬರುವುದಿಲ್ಲ. ಆರೋಪಿಗೂ ಲಾರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ವಿಮೆ ಹಣಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

(ಮರುವಿಚಾರಣೆ ಇಲ್ಲ)

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)  ಓ. ಹೇ. ಕೇ. ಸರಿ ಇದೆ.

ಪ್ರ.ದ.ನ್ಯಾದಂ.ಸೇಡಂ.

## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ. 609/2015

ಸಿಡಬ್ಲ್ಯೂ-3 ಪಿಡಬ್ಲ್ಯೂ-3

| | |
|---|---|
| ಹೆಸರುಃ | ಬಸಣ್ಣ |
| ತಂದೆ ಹೆಸರುಃ | ನಾಗಣ್ಣ |
| ವಯಸ್ಸುಃ | 45 ವರ್ಷ |
| ಉದ್ಯೋಗಃ | ಕೂಲಿ ಕೆಲಸ |
| ವಾಸ ಸ್ಥಳಃ | ಬಟಗೇರ ಗ್ರಾಮ |

ದಿನಾಂಕ 19-09-2024

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆಯು ಸ್ಥಳ ಪಂಚನಾಮೆಯಾಗಿದ್ದು ಸದರಿ ದಾಖಲೆಯನ್ನು ನಿ ಪಿ 4 ಮತ್ತು ದಾಖಲೆಯ ಮೇಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದರ ಮೇರೆಗೆ ಸಹಿಯನ್ನು ನಿ ಪಿ 4(ಎ) ಎಂದು ಗುರುತಿಸಲಾಯಿತು. ದಾಖಲೆಗೆ ನಾನು ಬಟಗೇರಾದಲ್ಲಿ ಸಹಿ ಮಾಡಿರುತ್ತೇನೆ. ಪೋಲೀಸರ ಹೇಳಿಕೆಯ ಮೇರೆಗೆ ಸಹಿ ಮಾಡಿದ್ದೇನೆ. ಪೊಲೀಸರು ಡ್ಯೂಟಿ ಗೆ ಬಂದಿದ್ದೇವೆ ಸಹಿ ಮಾಡು ಎಂದಿದ್ದಕ್ಕೆ ಸಹಿ ಮಾಡಿದ್ದೇನೆ. ಆರೋಪಿ ಪರಿಚಯ ಇಲ್ಲ. ಸದರಿ ದಾಖಲೆಯಲ್ಲಿರುವ ಮಾಹಿತಿಗಳ ಬಗ್ಗೆ ನನಗೆ ಏನೂ ಗೊತ್ತಿಲ್ಲ. ಸದರಿ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಈ ಪ್ರಕರಣದಲ್ಲಿ ನನ್ನ ಮುಂದೆ ಯಾವುದೇ ಸ್ಥಳ ಪಂಚನಾಮೆಯನ್ನು ಜರುಗಿಸಿ ಏನನ್ನು ಜಪ್ತು ಪಡಿಸಿಕೊಂಡಿಲ್ಲ.

**(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿ.26-02-2015 ರಂದು ಬೆಳ್ಳಿಗ್ಗೆ 06-45 ರಿಂದ 07-45 ರ ವರೆಗೆ ಪೊಲೀಸರು ಸೇಡಂ ರಿಬ್ಬನ್ ಪಾಳ್ಯದ ಮುಖ್ಯ ರಸ್ತೆಯ ಸೇಡಂ ಕೊಡ್ಲಾ ಕ್ರಾಸ್ ಹತ್ತಿರ ಮುಖ್ಯ ರಸ್ತೆಯ ಮೇಲೆ ಚಾ ಸಾ 1 ರವರು ತೋರಿಸಿರುವ ಜಾಗದಲ್ಲಿ ಪೊಲೀಸರು ನನ್ನ ಮತ್ತು ಚಾ ಸಾ 2 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಜರುಗಿಸಿ ಒಂದು ರಾಯಲ್ ಎನ್ ಫೀಲ್ಡ್ ಮೊಟಾರು ಸೈಕಲ್ ಸಂಖ್ಯೆ ಕೆ ಎ 32 ಇ ಡಿ 0712 ಮತ್ತು ಒಂದು ಅಶೋಕ್ ಲೈಲ್ಯಾಂಡ್ ಲಾರಿ ಸಂಖ್ಯೆ ಎಂ ಎಚ್ 12 ಎಚ್ ಡಿ 4724 ನ್ನು ಜಪ್ತು ಪಡಿಸಿದರು ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ಈಗಾಗಲೇ ಸದರಿ ವಾಹನಗಳ ಭಾವ ಚಿತ್ರಗಳನ್ನು ಈಗಾಗಲೇ ನಿ ಪಿ 2 ಮತ್ತು 3 ಎಂದು ಗುರುತಿಸಲಾಗಿದೆ, ಸದರಿಗಳನ್ನು ತೋರಿಸಿ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು

ನುಡಿದಿರುತ್ತಾರೆ.

**ಪಾಟಿ ಸವಾಲುಃ ಶ್ರೀ ಸಿ ಬಿ ಆರೋಪಿ ಪರ ವಕೀಲರಿಂದ ಃ- ಏನೂ ಇಲ್ಲ**

(ಮರುವಿಚಾರಣೆ ಇಲ್ಲ)
(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಪ್ರ.ದ.ನ್ಯಾದಂ.ಸೇಡಂ.

Accused is present. CW-9 and 3 are examined as PW-2 and 3 and got marked EX. P-2 to 4 (A). CW-4, 5 and 10 are given up. R/WS to CW-2,7,15 to 17.
Call on 08-10-2024.

**JMFC, Sedam.**